ಬೆಳಗ್ಗೆ 8 ಗಂಟೆ.

ಅಬ್ದುಲ್ಲಾ ಮಡ್ಲು ಕಟ್ಟಿನಲ್ಲಿದ್ದ ಒಣಮೀನಿನಲ್ಲಿ ಉಪ್ಪು ಹದವಾಗಿ ಬಿದ್ದಿದೆಯೋ, ಸರಿಯಾಗಿ ಒಣಗಿದೆಯೋ ಎಂಬುದನ್ನು ಪರಿಶೀಲಿಸಿ ಕೆಲಸದವರಿಗೆ ಕಟ್ಟನ್ನು ಗಟ್ಟಿಯಾಗಿ ಕಟ್ಟಲು ಆದೇಶಿಸುತ್ತಿದ್ದ. ಕರೀಮನೊಡನೆ ಲಾರಿ ಬಂತೇನೋ ಎಂದು ಕೇಳಲು ತಿರುಗಿದಾಗ ಅಬ್ಬಾಸ್ ಅವನನ್ನು ಕೂಗುತ್ತಿದ್ದದ್ದು ಕೇಳಿಸಿತು.

ಹತ್ತಿರ ಹೋಗಿ ಏನೆಂದು ಕೇಳುವ ಮೊದಲೇ ಅಬ್ಬಾಸ್ ಹೇಳಿದ,

'ಅರ್ಜೆಂಟಾಗಿ ಹೋಗಬೇಕಂತೆ. ಸಾಹುಕಾರ್ರು ಮನೆಯಲ್ಲಿ ನಿನ್ನನ್ನೇ ಕಾಯುತ್ತಿದ್ದಾರೆ. ನೀನು ಈಗಲೇ ನಾನು ತಂದ ಈ ಸೈಕಲ್‌ನಲ್ಲಿ ಹೋಗು, ತಡಮಾಡಬೇಡ. ಸಾಹುಕಾರ್ರು ಸಿಟ್ಟಿಗೆದ್ದಾರು.'

ಅಬ್ದುಲ್ಲಾ ಚುರುಕಾದ. ಕೈ ಮೀನಿನ ವಾಸನೆ ಬರುತ್ತಿತ್ತು. ತೊಳೆಯುವಷ್ಟು ಬಿಡುವಿಲ್ಲ. ಉಟ್ಟ ಲುಂಗಿಯ ತುದಿಗೆ ಒರೆಸಿಕೊಂಡ.

'ಜನ್ನತ್ ಮಹಲಿ'ನ ಗೇಟಿನೊಳಗೆ ಒಂದು ಬದಿಯಲ್ಲಿ ಸೈಕಲ್ ನಿಲ್ಲಿಸಿದ. ಪರಿಚಿತನಾಯಿ ಕುಂಯ್‌ಗುಟ್ಟಿತು. ಬಾಲ ಅಲ್ಲಾಡಿಸಿತು. ಒಳಗೆ ನುಗ್ಗಿದ. ಸಾಹುಕಾರ ಕೋಣೆಯ ಬಾಗಿಲಲ್ಲಿ ನಿಂತು ಇಣುಕಿದ.

ಖಾನ್ ಸಾಹೇಬರು ಒಳಗೆ ಶಥಪಥ ತಿರುಗುತ್ತಿದ್ದರು. ರೂಮಿನೊಳಗೆಲ್ಲಾ ಸಿಗರೇಟಿನ ಹೊಗೆ. ಎತ್ತಿಕಟ್ಟಿದ ಲುಂಗಿಯನ್ನು ಇಳಿ ಬಿಟ್ಟು ಸಲಾಂ ಮಾಡಿದ.

ಪ್ರತಿಯಾಗಿ ಸಾಹುಕಾರರು ಹೂಂಗುಟ್ಟಿದರು ಮಾತ್ರ.

ಒಮ್ಮೆ ನಾಟಕೀಯವಾಗಿ ನಕ್ಕರು. ಆತ್ಮೀಯತೆಯ ಸೋಗಿನೊಂದಿಗೆ ಸಡಗರ. ಅಬ್ದುಲ್ಲಾನಿಗೆ ಕಸಿವಿಸಿ– 'ಯಾಕೆ ಕರೆದಿರಬಹುದು?!' ಮೈಯಲ್ಲಿ ಸಣ್ಣಗೆ ನಡುಕ.

'ಬಾ... ಅಬ್ದುಲ್ಲಾ ಕೂತ್ಕೋ ಇಲ್ಲಿ...' ಖಾನ್ ಸಾಹೇಬರ ಸ್ನೇಹದ ಕರೆ. ಅಬ್ದುಲ್ಲಾಗೆ ಅಚ್ಚರಿ.

'ಪರವಾಗಿಲ್ಲ. ಸಾಹುಕಾರ್ರು... ಏನೋ ಅರ್ಜಂಟಾಗಿ ಬರ್ಲಿಕ್ಕೆ ಅಬ್ಬಾಸನೊಡನೆ ಹೇಳಿ

'ಮಯೂರ'ದ 48 ವರ್ಷಗಳ ಸುದೀರ್ಘ ಪಯಣದಲ್ಲಿ ಕನ್ನಡದ ಸಿದ್ಧಪ್ರಸಿದ್ಧರು ಜೊತೆಯಾಗಿದ್ದಾರೆ. ಈ ನವಿಲಿನ ನಡಿಗೆಯಲ್ಲಿ ಕಂಡ ಮೋಹಕ 'ನವಿಲುಗರಿ'ಗಳನ್ನು ಒಂದೊಂದಾಗಿ ಹೆಕ್ಕಿ ಈ ಅಂಕಣ ಮುಂದಿಡುತ್ತದೆ. ಈ ನವಿಲುಗರಿಗಳು ಹಲವು ಓದುಗರ ನೆನಪುಗಳನ್ನು ಮಧುರವಾಗಿ ನೇವರಿಸುವುದಲ್ಲದೇ ಹೊಸ ಓದುಗರಿಗೆ ಹಳೆಯ ಬರಹಗಳ ಅಂದವನ್ನು ಪರಿಚಯಿಸುತ್ತವೆ. ಇದು, 1980ರ ಜೂನ್ ತಿಂಗಳ ಸಂಚಿಕೆಯಿಂದ ಆಯ್ದ ಬರಹ. ಚಿತ್ರ ಜಿ.ಕೆ ಸತ್ಯ ಅವರದು.